ವಿಷಯ:- ಗುಬ್ಬಿ ತಾಲ್ಲೂಕು ಹೊಸಕೆರೆ ವಿದ್ಯುತ್ ಸ್ಥಾವರ ಸ್ಥಾಪನೆಗೆ ಮರಗಳನ್ನು ಕಡಿದಿರುವುದಕ್ಕೆ ಪರಿಹಾರ ಧನ.

1127 (811) **ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):-** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಬ್ಬಿ ತಾಲ್ಲೂಕು ಹೊಸಕೆರೆ ವಿದ್ಯುತ್ ಸ್ಥಾವರಕ್ಕೆ ಸಾರ್ವಜನಿಕರ ಜಮೀನಿನಲ್ಲಿದ್ದ ಬೆಲೆ ಬಾಳುವ ಮರ ಗಿಡಗಳನ್ನು ಕಡೆದಿದ್ದು ಆ ಮರಗಳಿಗೆ ಪರಿಹಾರ ಧನ ನಿಗದಿಪಡಿಸುವಲ್ಲಿ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪರಿಹಾರ ನಿಗದಿ ಮಾಡುವಾಗ ವರ್ಗೀಕರಿಸುವಲ್ಲಿ ಎಲ್ಲಾ ನಿಯಮಗಳನ್ನು ಸರ್ಕಾರಿ ಅಧಿಕಾರಿಗಳು ಅನುಸರಿಸದೇ ಇರುವುದು ನಿಜವೇ?

ಇ) ಹಾಗಿದ್ದಲ್ಲಿ, ಪುನರ್ ಪರಿಶೀಲಿಸಿ ವರ್ಗೀಕರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಅನ್ಯಾಯವಾಗಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.

ಆ) ನಿಜವಲ್ಲ.

ಇ) ಮೌಲ್ಯಮಾಪನವನ್ನು ಇಲಾಖೆಯ ಮಾರ್ಗಸೂಚಿಯ ಪ್ರಕಾರ ನಿಯಮಬದ್ಧವಾಗಿ ಮಾಡಿರುವ ಕಾರಣ, ಹಾಗೂ ಈ ಕ್ರಮದಲ್ಲಿ ಯಾವುದೇ ಲೋಪವಾಗಿರದ ಕಾರಣ, ಮೌಲ್ಯಮಾಪನವನ್ನು ಪುನರ್ ಪರಿಶೀಲಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ವಿಷಯ:- ಧಾರವಾಡ ಜಿಲ್ಲೆಯಲ್ಲಿರುವ ಶೆಡ್ಯೂಲ್ ಬಸ್ಸುಗಳ ವಿವಾದ ಕುರಿತು

1129 (1909) **ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ - ಧಾರವಾಡದಲ್ಲಿ ಎಷ್ಟು ಶೆಡ್ಯೂಲ್ ಬಸ್‌ಗಳಿವೆ?

ಆ) ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಶೆಡ್ಯೂಲ್ ಬಸ್‌ಗಳಿವೆ?

ಇ) ಗ್ರಾಮಾಂತರ ಪ್ರದೇಶದಲ್ಲಿ ಬಸ್ ಸಂಚಾರ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ನಗರ (ಸಾಮಾನ್ಯ ಮತ್ತು ಪುಷ್ಪಕ್), ಉಪನಗರ ಮತ್ತು ಹುಬ್ಬಳ್ಳಿ ಮತ್ತು ಧಾರವಾಡ ನಡುವೆ ಆಚರಣೆಯಾಗುವ ಬಸ್ಸುಗಳು ಸೇರಿದಂತೆ ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಲ್ಲಿ 222 ಅನುಸೂಚಿಗಳು ಆಚರಣೆಯಲ್ಲಿವೆ.